ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ ಮಾರ್ಚಿ ತಾ॥ 22, ಸನ್ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಶೀಮೆಯ ಚೀಫ್ ಕೋರ್ಟ್‌ನಲ್ಲಿ.

ಸನ್ 1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ 47.

ಅರ್ಜಿದಾರರು) ಸರ್ವೋತ್ತಮರಾವ್ ವಗೈರೇರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಮೇಲ್ಕಂಡ ಸರ್ವೋತ್ತಮರಾವ್ ವಗೈರೇರು, ಬೆಂಗಳೂರು ಬಾಲೋದಯ ಸಹಾಯನಿಧಿ ಲಿಮಿಟೆಡ್ಡನ್ನ ವಾಲಂಟರಿ ವೈಂಡಪ್ ಮಾಡಿ ಯಿದ್ದಾಗ್ಯೂ ಕೆಲವು ಷೇರುದಾರರು ದಾವೆಗಳು ಮಾಡಿ ಅವರುಗಳಿಗೆ ಬರತಕ್ಕ ವೊಬಲಗನ್ನ ತೆಗದುಕೊಂಡಿರುತ್ತಾರಲ್ಲದೆ ಯಿನ್ನೂ ಕೆಲವರು ಕಂಪೆನಿ ಮೂಲಧನವನ್ನು ಜಪ್ತು ಮಾಡಿಸುವದರಲ್ಲಿ ಯಿಧಾರಾದ್ದರಿಂದ ಈ ಪ್ರಕಾರ ಅವರುಗಳಿಗೆ ವೊಬಲಗು ಸಲ್ಲುತ್ತಾ ಹೋದರೆ ಬಾಕಿ ಷೇರುದಾರ್ರಿಗೆ ಭಾಹಳ ನಷ್ಟ ಸಂಭವಿಸುವ ಕಾರಣ ಕೋರ್ಟು ಮೂಲಕ ವೈಂಡಪ್ ಮಾಡಿಸಿ ಲಿಕ್ವಿಡೇಟರನ್ನ ವೊಕರರ್ ಮಾಡಿಸಬೇಕೆಂದು ವಗೈರೆ ಅರ್ಜಿಕೊಟ್ಟು ಯಿರುತ್ತಾರೆ. ಈ ಬಗ್ಗೆ ಯಿದೇ ಮಾರ್ಚಿ ತಿಂಗಳು 18ನೇ ತಾರೀಖು ಮಂಗಳವಾರ ಹಿಯರಿಂಗ್ ವೊಕರರ್ ಮಾಡಿದೆ. ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಆಕ್ಷೇಪಣೆ ಯಿರತಕ್ಕವರೆಲ್ಲರೂ ಆವರಾಗಲಿ ಅವರ ತರಫ್ ವೊಬ್ಬ್ಯಾರಿ ಪಡದ ಅಡ್ವೊಕೇಟರಾಗಲಿ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಸಬಹುದು.

ತಾರೀಖು 12ನೇ ವಾಹೆ ಮಾರ್ಚಿ ಸನ್ 1890ನೇ ಇಸವಿ.

ಸನ್ 1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ 50.

ಅರ್ಜಿದಾರರು.
ಚಿಂತಾಮಣಿಯಲ್ಲಿ ಇರುವ ದ್ರವ್ಯಸಹಾಯ ಕಂಪೆನಿ ಷೇರುದಾರರು.
1ನೇ ಕೇಪಾವಧಾನಿ 2ನೇ ರಾಮಶಾಸ್ತ್ರಿ.

ಕೌಂಟರ್ ಅರ್ಜಿದಾರರು.
ಚಿಂತಾಮಣಿಯಲ್ಲಿ ಇರುವ ದ್ರವ್ಯಸಹಾಯ ಕಂಪನಿ ಸೆಕರೆಟರಿ ನಂದಗುಡಿ ಶ್ರೀನಿವಾಸಾಚಾರ್ರು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.

ಮೇಲ್ಕಂಡ ಕೇಪಾವಧಾನಿ ಮುಂತಾದವರು, ಈಗ 4 ತಿಂಗಳಿಂದಲೂ ಈ ಕಂಪೆನಿ ಕಾರ್ಯಗಳು ನಡಿಯದೆ ಯಿರುವದ್ದರಿಂದ ಷೇರುದಾರ್ರು ಪೈಕಿ ಪ್ಲೀಡರ್ ಸೂರಪ್ಪ, ಆತನಿಗೆ ಸಲ್ಲತಕ್ಕ ವೊಬಲಗಿಗೋಸ್ಕರ ದಾವಾ ಮಾಡಿ ಯಿರುವದಲ್ಲದೆ ಯಿನ್ನೂ ಕೆಲವರು ದಾವಾ ಮಾಡುವದಕ್ಕೆ ಪ್ರಯತ್ನ ಪಟ್ಟು ಯಿರುವದ್ದರಿಂದ ಡಿಕ್ರಿಗಳು ಪಡೆದು ಅವರವರ ಸಹಾಯ ದ್ರವ್ಯಗಳನ್ನ ತೆಗದುಕೊಳ್ಳುತ್ತಾ ಹೋದರೆ ಬಾಕಿ ಷೇರುದಾರುಗಳಿಗೆ ನಷ್ಟ ಸಂಭವಿಸುವ ಕಾರಣ ಈ ಕಂಪನಿ ವೈಂಡಪ್ ಮಾಡಿಸಬೇಕೆಂದು ವಗೈರೆ

ಇದರ ಯ್ತೀರ್ಥದ ಬಗ್ಗೆ ಚಾಲ್ತಿ ಇಸವಿ ಏಪ್ರೆಲ್ ತಿಂಗಳು 1ನೇ ತಾರೀಖು ಮಂಗಳವಾರ ಹಿಯರಿಂಗ್ ನಿಷ್ಕರ್ಷೆ ಮಾಡಿ ಯಿದೆ. ಆ ತಾರೀಖು ದಿವಿ 11 ಘಂಟೆಗೆ ಆಕ್ಷೇಪಣೆ ಯಿರತಕ್ಕವರೆಲ್ಲರೂ ಅವರಾಗಲಿ ಅವರ ಕಡೆ ವೊಖ್ತ್ಯಾರಿ ಪಡದ ಅಡ್ವೊಕೇಟರಾಗಲಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಯಪಡಿಸಬಹುದು.

ತಾರೀಖು 8ನೇ ಮಾಹೆ ಮಾರ್ಚಿ 1890ನೇ ಇಸವಿ.

ಸನ್ 1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂಬರ್ 51.

ಅರ್ಜಿದಾರ್ರು.		ಕೌಂಟರ್ ಅರ್ಜಿದಾರ್ರು.
1ನೇ ಭಾಸ್ಕರರಾವ್	2ನೇ ರಾಮಚಂದ್ರಪ್ಪ	ಚಿಂತಾಮಣಿ ತಾಲ್ಲೂಕು ಚಿಲಮಕೋಟೆಯಲ್ಲಿ ಯಿರುವ ಶ್ರೀ ಸುಂದರೇಶ್ವರ ಭಕ್ತಸಂರಕ್ಷಣೆ ನಿಧಿ ಬ್ಯಾಂಕ್ ಸೆಕರೆಟರಿ ಯೆಸ್. ಲಕ್ಷ್ಮೀನರಸಪ್ಪ.
3ನೇ ಸುಬ್ಬಾಭಟ್ಟ	4ನೇ ನಂಜುಂಡಶಾಸ್ತ್ರಿ	

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.

ಮೇಲ್ಕಂಡ ಭಾಸ್ಕರರಾವ್ ಮುಂತಾದವರು, ಈಗ 4 ತಿಂಗಳ್ಗಿಂದ ಚಿಲಮಕೋಟೆ ಶ್ರೀ ಸುಂದರೇಶ್ವರ ಭಕ್ತಸಂರಕ್ಷಣೆ ನಿಧಿ ಬ್ಯಾಂಕಿನ ಯಾವ ಕಾರ್ಯಗಳು ನಡಿಯದೆ ಷೇರ್‌ದಾರ್ರ ಪೈಕಿ ಕೆಲವರು ಡಿಕ್ರಿಗಳು ಪಡದು ಮೂಲಧನವನ್ನು ಜಫ್ತಿ ಮಾಡಿಸಿ ಯಿರುತ್ತಾರೆಂದುನ್ನೂ ಇನ್ನೂ ಕೆಲವರು ದಾವಾ ಮಾಡುವ ಪ್ರಯತ್ನದಲ್ಲಿ ಯಿರುತ್ತಾರೆಂದುನ್ನೂ ಅವರುಗಳಿಗೆ ಸಹಾಯದ ವೊಬಲಗು ಸಲ್ಲುತ್ತಾ ಬಂದರೆ ಬಾಕಿ ಷೇರುದಾರ್ರಿಗೆ ನಷ್ಟ ಸಂಭವಿಸುವ ಕಾರಣ ಬ್ಯಾಂಕ್ ವೈಂಡಫ್ ಮಾಡಿಸಬೇಕೆಂದು ವಗೈರೆ ಅರ್ಜಿಕೊಟ್ಟು ಯಿರುತ್ತಾರೆ. ಇದರ ಯಿತ್ಯರ್ಥದ ಬಗ್ಗೆ ಚಾಲ್ತಿ ಇಸವಿ ಏಪ್ರೆಲ್ ತಿಂಗಳು 1ನೇ ತಾರೀಖು ಮಂಗಳವಾರ ಹಿಯರಿಂಗ್ ವೊಕರರ್ ಮಾಡಿಯಿದೆ. ಆಕ್ಷೇಪಣೆ ಯಿರತಕ್ಕವರೆಲ್ಲರೂ ಅವರಾಗಲಿ ಅವರ ತರಫ್ ವೊಖ್ತ್ಯಾರಿ ಪಡದ ಅಡ್ವೊಕೇಟರಾಗಲಿ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಸಬಹುದು.

ತಾರೀಖು 7ನೇ ಮಾಹೆ ಮಾರ್ಚಿ 1890ನೇ ಇಸವಿ.

ಸಿವಿಲ್ ತರಫ್.

ರೂಲ್ ಆಫ್ ಪ್ರ್ಯಾಕ್ಟಿಸ್ ಆಚರಣ ನಿಬಂಧನೆ ನಂಬರ್ 80.

ತಾರೀಖು 14ನೇ ಮಾರ್ಚಿ 1890ನೇ ಈಸವಿ.

ಕಕ್ಷಿಗಾರರು ಹಾಜರ್ಮಾಡಿದ ದಸ್ತೈವಜುಗಳನ್ನು ನಾಶ ಮಾಡತಕ್ಕ ವಿಷಯದಲ್ಲಿ ಕೊಟ್ಟಿರುವ 61—66ನೇ ನಂಬರ್ ಆಚರಣ ನಿಬಂಧನೆಗಳಲ್ಲಿ ನಮೂದಾಗುವ ವಾಯಿದೆಯು ಸ್ವಲ್ಪವಾಗಿದೆ ಎಂತಲೂ, ಇದರಿಂದ ಕಕ್ಷಿಗಾರರಿಗೆ ಬಹಳ ಪ್ರತಿಕೂಲ ಉಂಟಾಗಿದೆ ಎಂತಲೂ, ಈ ಕೋರ್ಟಿಗೆ ತಿಳಿಯಬಂತು; ಆದಕಾರಣ ಮೇಲೆಕಂಡ ಆಚರಣ ನಿಬಂಧನೆಗಳು ಇದರಿಂದ ರದ್ದು ಮಾಡಲ್ಪಟ್ಟವೆ ಎಂತಲೂ, ಮುಂದಕ್ಕೆ ಕಕ್ಷಿಗಾರರು ಹಾಜರ್ಮಾಡುವ ದಸ್ತೈವಜಾಗಳನ್ನು ನಾಶ ಪಡಿಸ ಕೂಡದೆಂತಲೂ, ಚೀಫ್ ಕೋರ್ಟಿನವರು ಅಪ್ಪಣೆ ಮಾಡುತ್ತಾರೆ.

ಹುಕುಂ ಎವೋಜ್ಞೆಬ್,
ಎಸ್. ಆರ್. ಸುಬ್ಬರಾಯರ್,
ರಜಿಸ್ಟ್ರಾರ್.

ಫಾರೆಸ್ಟ್ ಇಲಾಖಾ.

ತಾರೀಖು 20ನೇ ಫಿಬ್ರವರಿ ಸನ್ 1890.

ಸನ್ 1878ನೇ ಇಸವಿ ಫಾರೆಸ್ಟ್‌ರೂಲ್ಸಿನ 9ನೇ ಸೆಕ್ಷನ್ ಅನುಸರಿಸಿ ಈ ಕೆಳಿಗೆ ನಮೂದಿಸಿ ಯಿರುವ ನಂದೀ ಸ್ಟೇಟ್ ಫಾರೆಸ್ಟಿನ ಗಡಿ ನಿಷ್ಕರ್ಷೆ ಇದರಿಂದ ಸಕಲ ಜನಗಳ ತಿಳುವಳಿಕೆ ಬಗ್ಗೆ ಫಾಯಿಸ್ ಮಾಡಲ್ಪಟ್ಟಿರುತ್ತೆ.

ನಂದೀ ಸ್ಟೇಟ್ ಫಾರೆಸ್ಟ್.

ಪೂರ್ತರಕ್ಕೆ—ಚಿಕ್ಕಬಳ್ಳಾಪುರ ತಾಲ್ಲೂಕು ನಾರಾಯಣಪುರ ಜೋಡೀ ಕಣುವೆ ಸರಹದ್ದು.

ಪೂರ್ವಕ್ಕೆ—ನಂದೀ ಗ್ರಾಮದ ಸರ್ವೆ ನಂಬರುಗಳು 77, 78, 79, 103, ಮತ್ತು 106, ಅಂಗಟ್ಟು ಗ್ರಾಮದ ಸರ್ವೆ ನಂಬರ್ 42, ಕುರುವಾವತ್ತಿ ಗ್ರಾಮದ ಸರ್ವೆ ನಂಬರುಗಳು 19, 126, 152, 154, 155, ಮತ್ತು 157, ಸುಲ್ತಾನಪ್ಯಾಟೆ ಗ್ರಾಮದ ಸರ್ವೆ ನಂಬರುಗಳು 50 ಮತ್ತು 80 ಯಾನೆ ಸರಹದ್ದುಗಳು.

ದಕ್ಷಿಣಕ್ಕೆ—ದೊಡ್ಡ ಬಳ್ಳಾಪುರ ತಾಲ್ಲೂಕು ಮುಜರೆ ಕಣುವೆಪುರ ಹೆಗ್ಗಡಹಳ್ಳಿ ಸರಹದ್ದು. ಮತ್ತು ಹೊಸದಾಗಿ ಆಗಿ ಯಿರುವ ಕೋಲಾರ ಸೋವನಪುರ ರಸ್ತೆ